ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	250
2	ಸದಸ್ಯರ ಹೆಸರು	ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)
3	ಉತ್ತರಿಸಬೇಕಾದ ದಿನಾಂಕ	09.12.2020
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಿಂದ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಕಂದಾಯ ಮತ್ತು ಸರ್ವೆ ಇಲಾಖೆಯಡಿಯಲ್ಲಿ ಸಕಾಲ ವ್ಯವಸ್ಥೆಯಡಿಯಲ್ಲಿ ದಾಖಲಾದ ಅರ್ಜಿಗಳ ಸಂಖ್ಯೆ ಎಷ್ಟು; (ಇಲಾಖೆವಾರು ವಿವರ ನೀಡುವುದು)</td><td>
ಕಳೆದ ಮೂರು ವರ್ಷಗಳಿಂದ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಸರ್ವೆ ಇಲಾಖೆಯಲ್ಲಿ ಸಕಾಲ ವ್ಯವಸ್ಥೆಯಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ವಿವರ
<table>
<tr><th>ತಾಲ್ಲೂಕು</th><th>ಸ್ವೀಕೃತವಾದ ಅರ್ಜಿಗಳ ಸಂಖ್ಯೆ</th></tr>
<tr><td>ಬೆಂಗಳೂರು ಉತ್ತರ</td><td>3792</td></tr>
<tr><td>ಯಲಹಂಕ</td><td>7022</td></tr>
<tr><td>ಬೆಂಗಳೂರು ಪೂರ್ವ</td><td>8109</td></tr>
<tr><td>ಬೆಂಗಳೂರು ದಕ್ಷಿಣ</td><td>4989</td></tr>
<tr><td>ಆನೇಕಲ್</td><td>117178</td></tr>
<tr><td>ಒಟ್ಟು</td><td>141090</td></tr>
</table>
ಕಳೆದ ಮೂರು ವರ್ಷಗಳಿಂದ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಡಿ ಸಕಾಲ ವ್ಯವಸ್ಥೆಯಡಿಯಲ್ಲಿ ಸ್ವೀಕೃತವಾದ ಅರ್ಜಿ ಗಳ ವಿವರ
<table>
<tr><th>ವರ್ಷ</th><th>ಸ್ವೀಕೃತಿ</th></tr>
<tr><td>2018</td><td>1282449</td></tr>
<tr><td>2019</td><td>887686</td></tr>
<tr><td>2020</td><td>439071</td></tr>
<tr><td>ಒಟ್ಟು</td><td>2609206</td></tr>
</table>
</td></tr>
<tr><td>ಆ)</td><td>ದಾಖಲಿಸಲ್ಪಟ್ಟ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳು ವಿಲೇಯಾಗಿವೆ; ಮತ್ತು ವಿಲೇ ಮಾಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)</td><td>
ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಸರ್ವೆ ಇಲಾಖೆಯಲ್ಲಿ ಸಕಾಲ ವ್ಯವಸ್ಥೆಯಡಿಯಲ್ಲಿ ಸ್ವೀಕೃತವಾಗಿ ವಿಲೆಪಡಿಸಿರುವ ಮತ್ತು ಬಾಕಿಯಿರುವ ಅರ್ಜಿಗಳ ವಿವರ
<table>
<tr><th>ತಾಲ್ಲೂಕು</th><th>ವಿಲೇಯಾದ ಅರ್ಜಿಗಳ ಸಂಖ್ಯೆ</th><th>ಬಾಕಿಯಿರುವ ಅರ್ಜಿಗಳ ಸಂಖ್ಯೆ</th></tr>
<tr><td>ಬೆಂಗಳೂರು ಉತ್ತರ</td><td>3792</td><td>0</td></tr>
<tr><td>ಯಲಹಂಕ</td><td>7022</td><td>0</td></tr>
<tr><td>ಬೆಂಗಳೂರು ಪೂರ್ವ</td><td>8109</td><td>0</td></tr>
<tr><td>ಬೆಂಗಳೂರು ದಕ್ಷಿಣ</td><td>4989</td><td>0</td></tr>
<tr><td>ಆನೇಕಲ್</td><td>117178</td><td>0</td></tr>
<tr><td>ಒಟ್ಟು</td><td>141090</td><td>0</td></tr>
</table>
</td></tr>
</table>

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಡಿಯಲ್ಲಿ ಸಕಾಲ ವ್ಯವಸ್ಥೆಯಡಿಯಲ್ಲಿ ಸ್ವೀಕೃತವಾಗಿ ವಿಲೆಪಡಿಸಿರುವ ಮತ್ತು ಬಾಕಿಯಿರುವ ಅರ್ಜಿಗಳ ವಿವರ

ವರ್ಷ	ವಿಲೇ	ಬಾಕಿ
2018	1241510	0
2019	903999	0
2020	443914	325
ಒಟ್ಟು	**2589423**	**325**

ಇ) ನಿಯಮಿತ ಅವಧಿಯೊಳಗೆ ವಿಲೇ ಮಾಡದ ಬಾಕಿ ಇರುವ ಅರ್ಜಿಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಸರ್ವೆ ಇಲಾಖೆಯಲ್ಲಿ ಸಕಾಲ ವ್ಯವಸ್ಥೆಯಡಿಯಲ್ಲಿ ಸ್ವೀಕೃತವಾದ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಯಾವುದೇ ಅರ್ಜಿಗಳು ಬಾಕಿಯಿರುವುದಿಲ್ಲ.

ಜಿಲ್ಲೆಗಳಲ್ಲಿ ನಾಗರೀಕರು ಸಕಾಲ ಸೇವೆಯಡಿ ವಿವಿಧ ನಾಡಕಛೇರಿ ಸೇವೆಗಳಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಸಕಾಲ ಅವಧಿಯೊಳಗೆ ವಿಲೇವಾರಿ ಮಾಡದೇ, ಬಾಕಿ ಉಳಿಸಿಕೊಂಡಿರುವ ಅರ್ಜಿಗಳನ್ನು ಖುದ್ದಾಗಿ ಸಂಬಂಧಿಸಿದ ತಹಶೀಲ್ದಾರರೊಂದಿಗೆ ಚರ್ಚಿಸಿ ಕೂಡಲೇ ವಿಲೇವಾರಿ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲು ಹಾಗೂ ವಿಳಂಬವಾಗಿ ವಿಲೇ ಮಾಡದೇ ಬಾಕಿ ಉಳಿಸಿಕೊಂಡಿರುವ ಸಂಬಂಧಿಸಿದ ತಹಶೀಲ್ದಾರ್/ ಉಪತಹಶೀಲ್ದಾರರುಗಳಿಗೆ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ-2011 (ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011) ರಡಿ ನಮೂನೆ ಉ-4 ರನ್ವಯ ಕಾರಣ ಕೇಳಿ ನೋಟೀಸ್ ನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿ/ ಮೇಲ್ಮನವಿ ಅಧಿಕಾರಿ ಮತ್ತು ಶಿಸ್ತು ಪ್ರಾಧಿಕಾರಿಯಿಂದ ಜಾರಿ ಮಾಡಿ ಶಿಸ್ತು ಕ್ರಮ ಜರುಗಿಸಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಲು ತಿಳಿಸಿ, ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ನಿರ್ದೇಶನಾಲಯದಿಂದ ಪತ್ರವನ್ನು ಬರೆಯಲಾಗುತ್ತಿದೆ.

ಸಂಖ್ಯೆ: ಕಂಇ 173 ಎಸ್‌ಎಸ್‌ಸಿ 2020

(ಆರ್.ಅಶೋಕ)
ಕಂದಾಯ ಸಚಿವರು